# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2447
ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 27.03.2026

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ತಮ್ಮ ಘನ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯ ಮಹಿಳೆಯರಿಗೆ ಉಚಿತವಾಗಿ ಸಾಮಾನ್ಯ ಬಸ್ಸುಗಳಲ್ಲಿ ಕರ್ನಾಟಕ ರಾಜ್ಯದಾದ್ಯಂತ ಪ್ರಯಾಣ ಮಾಡಲು ಅವಕಾಶ ನೀಡಿರುತ್ತಾರೆ. ಪ್ರಸ್ತುತ ರಾಜ್ಯದಲ್ಲಿ ಅಂಗವಿಕಲರಿಗೆ ಸರ್ಕಾರವು ಪ್ರತಿ ವರ್ಷ 660 ರೂ ಪಡೆದು ರಿಯಾಯಾತಿ ನೀಡಿ ವಾಸ ಸ್ಥಳದಿಂದ 100 ಕಿಮೀ ವರೆಗೆ ಪ್ರಯಾಣ ಮಾಡಲು ಅವಕಾಶ ನೀಡಿರುತ್ತದೆ; ಮಾನ್ಯ ಕಾಂಗ್ರೇಸ್ ಪಕ್ಷದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ದಿ\|\|ಎಸ್ ಎಂ ಕೃಷ್ಣ ರವರ ಅಧಿಕಾರವಧಿಯಲ್ಲಿ ಸದರಿ ಅಂಗವಿಕಲರಿಗೆ ಸಂಪೂರ್ಣ ಉಚಿತವಾಗಿ ರಾಜ್ಯದ್ಯಂತ ಪ್ರಯಾಣ ಮಾಡಲು ಅನುಮತಿ ಮಾಡಿಕೊಡಲಾಗಿತ್ತು, ಪ್ರಸ್ತುತ ಸರ್ಕಾರದಿಂದ ಈ ಯೋಜನೆಯ ಬಗ್ಗೆ ಯಾವ ನಿರ್ಣಯ ತೆಗೆದುಕೊಳ್ಳಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶದಂತೆ, 2001ನೇ ಸಾಲಿನಲ್ಲಿ ರಾಜ್ಯದ 20,000 ತೀವ್ರತರವಾದ ದೈಹಿಕ ಅಂಗವಿಕಲರಿಗೆ ರಾಜ್ಯಾದ್ಯಂತ ಪ್ರಯಾಣಿಸಲು ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಉಚಿತ ಬಸ್ ಪಾಸ್‌ಗಳನ್ನು ವಿತರಿಸಲಾಗಿರುತ್ತದೆ.<br><br>ತದನಂತರ ಉಳಿದ ಅಂಗವಿಕಲರಿಗೂ ಬಸ್‌ಪಾಸ್ ವಿತರಿಸುವಂತೆ ಮನವಿ ಸ್ವೀಕರಿಸಲಾಗಿರುತ್ತದೆ. ಅದಕ್ಕನುಗುಣವಾಗಿ, ಸರ್ಕಾರದ ದಿನಾಂಕ: 27.10.2003ರ ಆದೇಶದನ್ವಯ ನಾಲ್ಕು ಸಾರಿಗೆ ನಿಗಮ / ಸಂಸ್ಥೆಗಳು, ರಾಜ್ಯದಲ್ಲಿನ 50,000 ವಿಕಲಚೇತನರಿಗೆ 100 ಕಿ.ಮೀ ವ್ಯಾಪ್ತಿಯಲ್ಲಿ ಪ್ರಯಾಣಿಸಲು ರಿಯಾಯಿತಿ ದರದ ಬಸ್‌ಪಾಸ್‌ನ್ನು ವಿತರಿಸಿರುತ್ತದೆ.<br><br>ನಂತರದಲ್ಲಿ, ಸರ್ಕಾರದ ದಿನಾಂಕ:14.05.2007ರ ಆದೇಶದಂತೆ, ರಾಜ್ಯದ ಎಲ್ಲಾ ವಿಕಲಚೇತನರಿಗೂ ರಿಯಾಯಿತಿ ಬಸ್ ಪಾಸುಗಳನ್ನು ವಿತರಿಸಲಾಗುತ್ತಿದೆ.<br><br>2025ನೇ ಸಾಲಿನಲ್ಲಿ ನಾಲ್ಕು ಸಾರಿಗೆ ನಿಗಮ / ಸಂಸ್ಥೆಗಳ ವತಿಯಿಂದ, ರಾಜ್ಯದಲ್ಲಿನ ಒಟ್ಟಾರೆ 106046 ವಿಕಲಚೇತನರಿಗೆ ರಿಯಾಯಿತಿ ಬಸ್ ಪಾಸುಗಳನ್ನು ವಿತರಿಸಲಾಗಿದೆ.<br><br>ಪ್ರಸ್ತುತ, ವಿಕಲಚೇತನರಿಗೆ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಆ. | ಪ್ರಸ್ತುತ ಮಹಿಳೆಯರಿಗೆ ಉಚಿತವಾಗಿ ಎಲ್ಲಾ ಸಾರಿಗೆ ಇಲಾಖಾ ಬಸ್ಸುಗಳಿಗೆ ಉಚಿತ ಪ್ರಯಾಣ ಮಾಡಲು ಅವಕಾಶ ನೀಡಿದ್ದು ಅದೇ ರೀತಿಯಲ್ಲಿ ಅಂಗವಿಕಲರಿಗೆ ಯಾವುದೇ ಹಣ ಪಡೆಯದೇ ರಾಜ್ಯದ್ಯಂತ ಉಚಿತವಾಗಿ ಪ್ರಯಾಣ ಮಾಡಲು ಮಾನವೀಯತೆಯಿಂದ ಅವಕಾಶ ಕಲ್ಪಿಸಲಾಗುವುದೇ; | |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ.</td><td>ಅನ್ಯ ರಾಜ್ಯಗಳಲ್ಲಿ ಅಂಗವಿಕಲರಿಗೆ ಮಾಶಾಸನ ಹೆಚ್ಚಿಗೆ ಇದ್ದು ಕರ್ನಾಟಕದಲ್ಲಿ ಅದನ್ನು ವಿಸ್ತರಿಸಲಾಗುವುದೇ?</td><td>ರಾಜ್ಯದಲ್ಲಿ ಅಂಗವಿಕಲರಿಗೆ ಸಾಮಾಜಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಅರ್ಹತಾ ಮಾನದಂಡಗಳನ್ನು ಅನುಸರಿಸಿ ಸರ್ಕಾರದ ಆದೇಶಗಳನ್ವಯ ಅಂಗವಿಕಲ ಫಲಾನುಭವಿಗಳಿಗೆ ಶೇಕಡವಾರು ಅಂಗವಿಕಲತೆಯ ಪ್ರಮಾಣದ ಮೇರೆಗೆ ಈ ಕೆಳಗಿನಂತೆ ಮಾಸಾಶನ ಪಾವತಿಸಲಾಗುತ್ತಿದೆ.
<table>
<tr><th>ಸರ್ಕಾರದ ಆದೇಶ ಸಂಖ್ಯೆ:</th><th>ಅಂಗವಿಕಲತೆಯ ಪ್ರಮಾಣ</th><th>ಮಾಸಿಕ ಪಿಂಚಣಿ ಮೊತ್ತ</th></tr>
<tr><td>ಕಂಇ 39 ಎಂಎಸ್‌ಟಿ 2021, ದಿನಾಂಕ:31.07.2021</td><td>ಶೇ.40 ರಿಂದ ಶೇ.74ರವರೆಗಿನ ಅಂಗವಿಕಲರಿಗೆ</td><td>ರೂ.800/-</td></tr>
<tr><td>ಆರ್‌ಡಿ 47 ಡಿ.ಎಸ್.ಪಿ 2018, ದಿನಾಂಕ:18.03.2018</td><td>ಶೇ.75ಕ್ಕಿಂತ ಅಧಿಕ ಅಂಗವಿಕಲರಿಗೆ</td><td>ರೂ.1400/-</td></tr>
<tr><td>ಡಿ.ಎಸ್.ಎಸ್.ಪಿ-ಎಸ್.ಸಿ.ಎಸ್.ಇಂ-ಪಿ..ಎಚ್.ಪಿ.5/2021, ದಿನಾಂಕ:07.12.2021</td><td>ಶೇ.75ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿದವರಿಗೆ</td><td>ರೂ.2000/-</td></tr>
</table>
ಅಂಗವಿಕಲ ಫಲಾನುಭವಿಗಳಿಗೆ ಪಿಂಚಣಿ ಮೊತ್ತವನ್ನು ಹೆಚ್ಚಿಸುವ ಕುರಿತು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.</td></tr>
</table>

ಸಂಖ್ಯೆ: ಟಿಡಿ 167 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಮುಜರಾಯಿ ಸಚಿವರು